OCTOBER 31, 2025

AKASHAVANI - DHARWAD

PRADESH SAMACHARA (KANNADA) 07.05 A.M.

<><><>

ಪ್ರಸಾರ ಭಾರತಿ, ಆಕಾಶವಾಣಿ

ಧಾರವಾಡ

ಪ್ರದೇಶ ಸಮಾಚಾರ

<><><>

ಮುಖ್ಯಾಂಶಗಳು

<><><>

- ರಾಷ್ಟ್ರೀಯ ಏಕತಾ ದಿನ; 'ವೈವಿಧ್ಯತೆಯಲ್ಲಿ ಏಕತೆ' ಬಿಂಬಿಸುವ, ಅರ್ಥಪೂರ್ಣ ಕಾರ್ಯಕ್ರಮ, ಆಯೋಜನೆ.
- 'ಜಾಗೃತಿ, ನಮ್ಮೆಲ್ಲರ ಸಾಮಾಜಿಕ ಜವಾಬ್ದಾರಿ' ಧ್ಯೇಯದೊಂದಿಗೆ, ವಿಚಕ್ಷಣಾ ಜಾಗೃತಿ ಸಪ್ತಾಹ.
- ಕರ್ನಾಟಕ ನವೋದ್ಯಮ ನೀತಿ; ಎಂಟು, ಟೆಕ್ನಾಲಜಿ ಬ್ಯುಸಿನೆಸ್ ಇನ್‌ಕ್ಯೂಬೇಟರ್ಸ್ ಸ್ಥಾಪನೆಗೆ, ಸಚಿವ ಸಂಪುಟ, ನಿರ್ಧಾರ.
- 'ಕೃಷಿ ಚಟುವಟಿಕೆಯಲ್ಲಿ ಡ್ರೋನ್ ಬಳಕೆ'; ರಾಷ್ಟ್ರೀಯ ಸಮ್ಮೇಳನಕ್ಕೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಚಾಲನೆ.

<><><>

ಈಗ ವಾರ್ತೆಗಳ ವಿವರ

<><><>

ರಾಷ್ಟ್ರೀಯ ಏಕತೆಯ ವಾಸ್ತು ಶಿಲ್ಪಿ, ಉಕ್ಕಿನ ಮನುಷ್ಯ ಎಂದೇ ಖ್ಯಾತಿವೆತ್ತ, ಸ್ವತಂತ್ರ ಭಾರತದ ಪ್ರಥಮ ಗೃಹಮಂತ್ರಿ, ಬಾರ್ಡೋಲಿಯ, ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ, 150 ನೇ ಜಯಂತಿಯನ್ನು ಇಂದು, ನಾಡಿನಾದ್ಯಂತ ರಾಷ್ಟ್ರೀಯ ಏಕತಾ ದಿನವಾಗಿ ಆಚರಿಸಿ, ಸರ್ದಾರರ ಸ್ಮೃತಿಗೆ ಗೌರವ ಅರ್ಪಿಸಲಾಗುತ್ತಿದೆ. ರಾಷ್ಟ್ರೀಯ ಏಕತಾ ದಿನ, ಭಾರತದ ಏಕತೆ, ಸಮಗ್ರತೆ ಮತ್ತು ರಾಷ್ಟ್ರೀಯ ಒಗ್ಗಟ್ಟನ್ನು ಸಂಕೇತಿಸುವಂತೆ, 'ವೈವಿಧ್ಯತೆಯಲ್ಲಿ ಏಕತೆ' ವಿಶೇಷ ಕಾರ್ಯಕ್ರಮ, ಜಾಥಾ ಹಾಗೂ ಮ್ಯಾರಾಥಾನ್‌ಗಳನ್ನು ರಾಜ್ಯಾದ್ಯಂತ ಆಯೋಜಿಸಲಾಗಿದೆ. 562 ರಾಜಪ್ರಭುತ್ವಗಳನ್ನು ಒಗ್ಗೂಡಿಸುವಲ್ಲಿ, ಸರ್ದಾರ್ ಪಟೇಲ್ ಅವರು ವಹಿಸಿದ, ನಿರ್ಣಾಯಕ ಪಾತ್ರವನ್ನು, ದೇಶ, ಏಕತಾ ದಿನದಂದು ಅಭಿಮಾನದಿಂದ, ಸ್ಮರಿಸುತ್ತಿದೆ.

<><><>

ಮೈಸೂರಿನ, ಕರ್ನಾಟಕ ಪೊಲೀಸ್ ಅಕಾದೆಮಿ, ಪೊಲೀಸ್ ತರಬೇತಿ ಶಾಲೆಯ ಪ್ರಶಿಕ್ಷಣಾರ್ಥಿಗಳಿಗೆ, ಸರ್ದಾರ ಪಟೇಲ ಜಯಂತಿ ಅಂಗವಾಗಿ ಏರ್ಪಡಿಸಿದ್ದ, ಐದು ಕಿಲೋ ಮೀಟರ್ ಐಕ್ಯತಾ ಓಟಕ್ಕೆ, ಅಪರ ಪೊಲೀಸ್ ಮಹಾನಿರ್ದೇಶಕ, ಅಲೋಕಕುಮಾರ ಚಾಲನೆ ನೀಡಿದರು.

<><><>

ರಾಷ್ಟ್ರೀಯ ಸಂಕಲ್ಪ ದಿನದ ಅಂಗವಾಗಿ, ಉತ್ತರಕನ್ನಡ ಜಿಲ್ಲೆ, ಪೊಲೀಸ್ ಇಲಾಖೆ, ಇಂದು ಬೆಳಗ್ಗೆ 6.30ಕ್ಕೆ, ಕಾರವಾರದ ರವೀಂದ್ರನಾಥ ಟ್ಯಾಗೋರ್ ಕಡಲ ತೀರದಲ್ಲಿ, ಏಕತಾ ಓಟಕ್ಕೆ, ಚಾಲನೆ ದೊರೆತಿದೆ.

<><><>

ವಿಚಕ್ಷಣಾ ಸಪ್ತಾಹದ ಅಂಗವಾಗಿ, ನಾಡಿದ್ದು ನವೆಂಬರ್ 2ರ ವರೆಗೆ, ಜನ ಜಾಗೃತಿ ಸಪ್ತಾಹ, ವಿವಿಧ ಇಲಾಖೆಗಳ ಸಹಯೋಗದಲ್ಲಿ, ರಾಜ್ಯಾದ್ಯಂತ ಆಯೋಜಿತವಾಗಿದೆ.

<><><>

ವಿಚಕ್ಷಣಾ ಜಾಗೃತಿ ಸಪ್ತಾಹದ ಅಂಗವಾಗಿ, ಬೆಂಗಳೂರಿನ ಕೇಂದ್ರ ವಾರ್ತಾ ಶಾಖೆಯ, ಅಪರ ಮಹಾ ನಿರ್ದೇಶಕ ಎಸ್.ಜಿ.ರವೀಂದ್ರ, ಅಧಿಕಾರಿಗಳು ಮತ್ತು ಸಿಬ್ಬಂದಿಗೆ, ಪ್ರತಿಜ್ಞಾ ವಿಧಿ ಬೋಧಿಸಿದರು.

<><><>

'ಜಾಗೃತಿ ನಮ್ಮೆಲ್ಲರ ಸಾಮಾಜಿಕ ಜವಾಬ್ದಾರಿ' ಎಂಬ ಧ್ಯೇಯದೊಂದಿಗೆ, ವಿಚಕ್ಷಣಾ ಜಾಗೃತಿ ಸಪ್ತಾಹಕ್ಕೆ, ಬಳ್ಳಾರಿ ಜಿಲ್ಲೆ, ಪ್ರಧಾನ ನ್ಯಾಯಾಧೀಶರಾದ, ಕೆ.ಜಿ.ಶಾಂತಿ ಚಾಲನೆ ನೀಡಿದರು.

<><><>

ಆಕಾಶವಾಣಿ ಧಾರವಾಡ ಕೇಂದ್ರದಲ್ಲಿ, ವಿಚಕ್ಷಣಾ ಸಪ್ತಾಹದ ಅಂಗವಾಗಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ, ಸಂಪನ್ಮೂಲ ವ್ಯಕ್ತಿಗಳಾಗಿ ಪಾಲ್ಗೊಂಡಿದ್ದ, ಕೆನರಾ ಬ್ಯಾಂಕ್, ನಿವೃತ್ತ ಹಿರಿಯ ಪ್ರಬಂಧಕ, ಪ್ರಲ್ಹಾದ ಕೌತಾಳ ರಸ ಪ್ರಶ್ನೆ ಮೂಲಕ, ಮಾಹಿತಿ ನೀಡಿದರು.

<><><>

ವಿಚಕ್ಷಣಾ ಸಪ್ತಾಹದ ಅಂಗವಾಗಿ, ಆಕಾಶವಾಣಿ ಧಾರವಾಡ ಕೇಂದ್ರ ಆಯೋಜಿಸಿದ್ದ, ನೇರ ಫೋನ್ ಇನ್ ಕಾರ್ಯಕ್ರದಲ್ಲಿ ಪಾಲ್ಗೊಂಡ, ಹುಬ್ಬಳ್ಳಿ-ಧಾರವಾಡ ಮಹಾನಗರ ಪೊಲೀಸ್ ಆಯುಕ್ತ ಎನ್. ಶಶಿಕುಮಾರ, ಪ್ರದೇಶ ಸಮಾಚಾರಕ್ಕಾಗಿ, ತಮ್ಮ ಅಭಿಪ್ರಾಯ ಹಂಚಿಕೊಂಡಿದ್ದಾರೆ.

<><><>

ಪೊಲೀಸ್ ಆಯುಕ್ತ ಎನ್. ಶಶಿಕುಮಾರ ಧ್ವನಿ 45 ಸೆಕೆಂದುಗಳು

<><><>

ನಾಳೆ, ನವೆಂಬರ್ 1, 70ನೇ ಕನ್ನಡ ರಾಜ್ಯೋತ್ಸವದ ಹಿನ್ನೆಲೆ, 21 ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಕೊಡುಗೆ ನೀಡಿರುವ, 70 ಜನ ಮಹನೀಯರಿಗೆ, 2025 ನೇ ಸಾಲಿನ, ರಾಜ್ಯೋತ್ಸವ ಪ್ರಶಸ್ತಿಯನ್ನು, ಕನ್ನಡ ಮತ್ತು ಸಂಸ್ಕೃತಿ ಖಾತೆ ಸಚಿವ ಶಿವರಾಜ ತಂಗಡಗಿ, ಬೆಂಗಳೂರಿನಲ್ಲಿ ಪ್ರಕಟಿಸಿ, ಸಾಧಕರನ್ನು ಅಭಿನಂದಿಸಿದ್ದಾರೆ.

<><><>

ಮುಖ್ಯಮಂತ್ರಿ ಸಿದ್ದರಾಮಯ್ಯ, ಎಕ್ಸ್ ಮಾಧ್ಯಮದಲ್ಲಿ, ರಾಜ್ಯೋತ್ಸವ ಪ್ರಶಸ್ತಿಗೆ ಭಾಜನರಾದ ಸಾಧಕರನ್ನು ಅಭಿನಂದಿಸಿ, 70 ಜನರ ಅನನ್ಯ ಸೇವೆ, ಇತರರಿಗೆ ಸ್ಫೂರ್ತಿಯಾಗಲಿ ಎಂದು, ಹಾರೈಸಿದ್ದಾರೆ.

<><><>

ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ, ಶಿವಮೊಗ್ಗದ ರಾಜೇಂದ್ರ ಚೆನ್ನಿ, ತುಮಕೂರಿನ ತುಂಬಾಡಿ ರಾಮಯ್ಯ ಮತ್ತು ಎಚ್.ಎಲ್. ಪುಷ್ಪಾ, ಚಿಕ್ಕಬಳ್ಳಾಪುರದ ಆರ್.ಸುನಂದಮ್ಮ, ಚಿಕ್ಕಮಗಳೂರಿನ ರಹಮತ್ ತರೀಕೆರೆ ಹಾಗೂ ವಿಜಯಪುರದ ಹ.ಮ. ಪೂಜಾರ, ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿದ್ದಾರೆ.

<><><>

ಸಂಗೀತ ಕ್ಷೇತ್ರದಿಂದ, ಕೊಪ್ಪಳದ ದೇವೇಂದ್ರಕುಮಾರ ಪತ್ತಾರ ಹಾಗೂ ಬೀದರಿನ ಮಡಿವಾಳಯ್ಯ ಸಾಲಿ, ಭಾಜನರಾಗಿದ್ದಾರೆ.

<><><>

ಸಂಕೀರ್ಣ ಕ್ಷೇತ್ರದಲ್ಲಿ, ರಾಜ್ಯೋತ್ಸವ ಪುರಸ್ಕಾರಕ್ಕೆ ಭಾಜನರಾಗಿರುವ, ಅಂತಾರಾಷ್ಟ್ರೀಯ ಖ್ಯಾತಿಯ ಹಿರಿಯ ಪುರಾತತ್ವ ಹಾಗೂ ಪ್ರಾಕ್ತನ ಶಾಸ್ತ್ರಜ್ಞ, ಧಾರವಾಡದ ಪ್ರೊಫೆಸರ್ ರವಿ ಕೋರಿಶೆಟ್ಟರ್, ಪ್ರದೇಶ ಸಮಾಚಾರಕ್ಕಾಗಿ ತಮ್ಮ ಸಂತಸ ಹಂಚಿಕೊಂಡಿದ್ದಾರೆ.

<><><>

ಪ್ರೊ. ರವಿ ಕೋರಿಶೆಟ್ಟರ್ ಧ್ವನಿ 11 ಸೆಕೆಂದುಗಳು

<><><>

ರಾಜ್ಯಪಾಲ, ಥಾವರಚಂದ್ ಗೆಹ್ಲೋಟ್ ಅವರು, ಚಿಕಿತ್ಸೆಗಾಗಿ ಬೆಂಗಳೂರಿನ ಮಣಿಪಾಲ್ ಆಸ್ಪತ್ರೆಗೆ ದಾಖಲಾಗಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ, ಭೇಟಿ ನೀಡಿ, ಅವರ ಆರೋಗ್ಯ ವಿಚಾರಿಸಿ, ಬೇಗ ಗುಣಮುಖರಾಗುವಂತೆ, ಹಾರೈಸಿದರು.

<><><>

ಈಗ ವಾಣಿಜ್ಯ ಪ್ರಕಟಣೆ,
ನಂತರ ಪ್ರದೇಶ ಸಮಾಚಾರ ಮುಂದುವರೆಯುವುದು..
(31 ಸೆಕೆಂದುಗಳು)

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಆಕಾಶವಾಣಿ ಸುದ್ದಿಗಳಿಗಾಗಿ, ನಮ್ಮ X ಖಾತೆ @airnews_Kannada ಹಾಗೂ

ನಮ್ಮ ಫೇಸ್ಬುಕ್ ಖಾತೆ Akashvani RNU Bengaluru-Dharwad ಅನುಸರಿಸಿ.

<><><>

'ಕರ್ನಾಟಕ ನವೋದ್ಯಮ ನೀತಿ 2022–27ರ ಅಡಿ, 80 ಕೋಟಿ ರೂಪಾಯಿ ವೆಚ್ಚದಲ್ಲಿ, 8 ಟೆಕ್ನಾಲಜಿ ಬ್ಯುಸಿನೆಸ್ ಇನ್‌ಕ್ಯೂಬೇಟರ್ಸ್ – 2.0 ಸ್ಥಾಪಿಸಲು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಧ್ಯಕ್ಷತೆಯಲ್ಲಿ ನಡೆದ, ಸಚಿವ ಸಂಪುಟ ಸಭೆ ನಿರ್ಧರಿಸಿದೆ. ಕಾರವಾರ ಬಂದರು ಸೇರಿದಂತೆ,ಹಳೇ ಮಂಗಳೂರಿನ ಬೇಂಗ್ರೆ ಬದಿ ಹಾಗೂ ನಗರ ಬದಿ ಬಂದರು, ಮತ್ತು ಮಲ್ಪೆಯ ಬರ್ತ್‌ಗಳನ್ನು, ಖಾಸಗಿ ಹಾಗೂ ಸಾರ್ವಜನಿಕ ಸಹಭಾಗಿತ್ವದಲ್ಲಿ, ಅಭಿವೃದ್ಧಿ ಪಡಿಸಲು, ಸಂಪುಟ ಒಪ್ಪಿಗೆ ನೀಡಿದೆ. ಸರ್ಕಾರಿ ಶಾಲೆಗಳಲ್ಲಿ, 2 ಸಾವಿರದ 200 ಕೊಠಡಿಗಳ ನಿರ್ಮಾಣ ಕಾರ್ಯವನ್ನು, ಲೋಕೋಪಯೋಗಿ ಇಲಾಖೆಗೆ ವಹಿಸಲು ತೀರ್ಮಾನ, ನೋಂದಣಿ ಮತ್ತು ಮುದ್ರಾಂಕ ಇಲಾಖೆಯಡಿ, 69 ಕೋಟಿ 13 ಲಕ್ಷ ರೂಪಾಯಿ ವೆಚ್ಚದಲ್ಲಿ,ಇನ್–ಹೌಸ್ ತಾಂತ್ರಿಕ ಅಭಿವೃದ್ಧಿ ವಿಭಾಗ, 'ಕಾವೇರಿ ಐಟಿ ಸೆಲ್' ಸ್ಥಾಪನೆಗೆ, ಸಚಿವ ಸಂಪುಟ ತೀರ್ಮಾನಿಸಿದೆ.

<><><>

ಕೃಷಿ ಕಾರ್ಮಿಕರ ಸಮಸ್ಯೆ, ನೀರಿನ ಅಪವ್ಯಯ, ರಾಸಾಯನಿಕಗಳ ಅಸಮಂಜಸ ಬಳಕೆ, ಬೆಳೆಗಳ ರೋಗ ಮತ್ತು ಕೀಟಗಳ ಉಲ್ಬಣವನ್ನು, ಡ್ರೋನ್ ತಂತ್ರಜ್ಞಾನ ಬಳಸಿ, ಸಕಾಲಿಕವಾಗಿ ಹತೋಟಿಗೆ ತರಲು ಸಾಧ್ಯವಿದೆ ಎಂದು, ಹುಬ್ಬಳ್ಳಿಯ ಏಕಸ್ ಲಿಮಿಟೆಡ್, ಪ್ರಧಾನ ತಂತ್ರಜ್ಞಾನ ಅಧಿಕಾರಿ, ರವಿ ಗುತ್ತಲ ತಿಳಿಸಿದ್ದಾರೆ. ಧಾರವಾಡ ಕೃಷಿ ವಿಶ್ವವಿದ್ಯಾಲಯದ, ರೈತರ ಜ್ಞಾನಾಭಿವೃದ್ಧಿ ಕೇಂದ್ರದಲ್ಲಿ, ರಾಷ್ಟ್ರೀಯ ಕೃಷಿ ವಿಕಾಸ ಯೋಜನೆ ಅಡಿ ಸಂಘಟಿಸಿದ, 'ಕೃಷಿ ಚಟುವಟಿಕೆಯಲ್ಲಿ ಡ್ರೋನ್ ಬಳಕೆ' ರಾಷ್ಟ್ರೀಯ ಸಮ್ಮೇಳನಕ್ಕೆ ಚಾಲನೆ ನೀಡಿ, ಅವರು ಮಾತನಾಡಿದರು. ಅತಿಥಿಗಳಾಗಿ ಪಾಲ್ಗೊಂಡಿದ್ದ, ಭೂಪಾಲದ ಕೇಂದ್ರೀಯ ಕೃಷಿ ತಂತ್ರಜ್ಞಾನ ಸಂಸ್ಥೆ ಮುಖ್ಯಸ್ಥ ವಿ.ಪಿ.ಚೌಧರಿ ಮಾತನಾಡಿ, ಕೃಷಿಯಲ್ಲಿ ಡ್ರೋನ್ ತಂತ್ರಜ್ಞಾನದ ಬಳಕೆ ಹೆಚ್ಚುತ್ತಿದ್ದು, ಸಂಶೋಧನೆ ಹಾಗೂ ನವೋದ್ಯಮಗಳ ಸ್ಥಾಪನೆಗೆ ಯುವ ಜನತೆಗೆ ಸದವಕಾಶವಿದೆ ಎಂದರು. ಉಪ ಕುಲಪತಿ ಪಿ.ಎಲ್.ಪಾಟೀಲ, ಅಧ್ಯಕ್ಷತೆ ವಹಿಸಿ ಮಾತನಾಡಿ, ಪ್ರಸ್ತುತ ದೇಶದಲ್ಲಿ 600ಕ್ಕೂ ಹೆಚ್ಚು ಡ್ರೋನ್ ಸಂಬಂಧಿ ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ. ಅವುಗಳಲ್ಲಿ 100ಕ್ಕೂ ಹೆಚ್ಚು ಕೃಷಿ ಡ್ರೋನ್ ಉತ್ಪಾದನಾ ಕಂಪನಿಗಳು ಸಕ್ರೀಯವಾಗಿದ್ದು, ಇತ್ತೀಚಿನ ಸಂಶೋಧನಾ ವರದಿಗಳ ಪ್ರಕಾರ, ಡ್ರೋನ್ ಆಧಾರಿತ ಕೃಷಿಯಿಂದ ಶೇಕಡ 40ರಷ್ಟು ರಾಸಾಯನಿಕಗಳ ಬಳಕೆ ತಗ್ಗಿಸಿ, ವಿಶ್ವಾದ್ಯಂತ 222 ಮಿಲಿಯನ್ ಟನ್ ನೀರು ಉಳಿತಾಯವಾಗಿದೆ, ಎಂದರು.

<><><>

ಡಿಸೆಂಬರ್ 6ರ ವರೆಗೆ, 60 ದಿನಗಳ ಕಾಲ, ಮೂರನೇ ಆವೃತ್ತಿಯ, 'ತಂಬಾಕು ಮುಕ್ತ ಯುವ ಅಭಿಯಾನ' ಆಯೋಜಿತವಾಗಿದೆ. ತಂಬಾಕು, ಗುಟಖಾ, ಸಿಗಾರೆಟ್, ಮದ್ಯ, ಮಾದಕ ವಸ್ತು ಸೇರಿದಂತೆ, ಇತರೆ 'ಮತ್ತು ಬರಿಸುವ ಪದಾರ್ಥ'ಗಳಿಂದ, ಯುವಜನತೆ ದೂರವಿರುವಂತೆ, ಕೊಟ್ಪಾ ಕಾಯ್ದೆ ಅಡಿ, ಕಾರ್ಯಾಚರಣೆ ಹಾಗೂ ಜನ ಜಾಗೃತಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿವಿಧ ಇಲಾಖೆಗಳ ಸಹಯೋಗದೊಂದಿಗೆ ಆಯೋಜಿಸಿದೆ.

<><><>

ಶಿವಮೊಗ್ಗ ಜಿಲ್ಲೆಯ, ಸಾವಿರ ಶಾಲೆಗಳಲ್ಲಿ, ತಂಬಾಕು ಉತ್ಪನ್ನಗಳ ಸೇವನೆಯಿಂದ ಉಂಟಾಗುವ ಅನಾರೋಗ್ಯ ಹಾಗೂ ದುಷ್ಪರಿಣಾಮಗಳ ಬಗ್ಗೆ ಅರಿವು ಮೂಡಿಸಲು, ಜಾಗೃತಿ ಕಾರ್ಯಕ್ರಮಗಳನ್ನು ಕೈಗೊಳ್ಳುವಂತೆ, ಜಿಲ್ಲಾಧಿಕಾರಿ ಗುರುದತ್ತ ಹೆಗಡೆ ಸೂಚಿಸಿದ್ದಾರೆ.

<><><>

ತಂಬಾಕು ಮುಕ್ತ ಬೀದರ್ ಅಭಿಯಾನದಡಿ, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಪ್ರದೀಪ ಗುಂಟಿ, ಜನಜಾಗೃತಿ ಭಿತ್ತಿ ಚಿತ್ರಗಳನ್ನು ಬಿಡುಗಡೆಗೊಳಿಸಿದರು. ಬೀದರ ನಾಗರಿಕ ಸನ್ಮಾರ್ಗ ಸಮಿತಿ ವತಿಯಿಂದ, ದುಷ್ಚಟ ಮುಕ್ತರಾದವರನ್ನು ಸನ್ಮಾನಿಸಿದರು.

<><><>

ಧಾರವಾಡ ಜಿಲ್ಲೆ, ಆರೋಗ್ಯಾಧಿಕಾರಿ ಎಸ್.ಎಂ. ಹೊನಕೇರಿ, ಪ್ರದೇಶ ಸಮಾಚಾರಕ್ಕಾಗಿ, ತಂಬಾಕು ಮುಕ್ತ ಯುವ ಅಭಿಯಾನದ ಕುರಿತು, ಮಾಹಿತಿ ನೀಡಿದ್ದಾರೆ.

<><><>

ಡಾಕ್ಟರ್ ಎಸ್.ಎಂ. ಹೊನಕೇರಿ ಧ್ವನಿ 30 ಸೆಕೆಂದುಗಳು

<><><>

ಕರ್ನಾಟಕ ವಿದ್ಯುತ್ ನಿಗಮ ನಿಯಮಿತ, ಕೆ.ಪಿ.ಸಿ.ಎಲ್. ಮೂಲಕ, ಅನುಷ್ಠಾನಗೊಳಿಸಲು ಉದ್ದೇಶಿಸಿರುವ, ಶರಾವತಿ ಪಂಪ್ಡ್ ಸ್ಟೋರೇಜ್ ಯೋಜನೆ, ರಾಜ್ಯದ ಇಂಧನ ಭವಿ ್ಯವಾಗಿದೆ; ಪಶ್ಚಿಮಘಟ್ಟದ ಪರಿಸರ ನಾಶವಾಗುತ್ತದೆ ಎಂಬ ವದಂತಿಗಳಿಗೆ

ಕಿವಿಗೊಡದಂತೆ, ಇಂಧನ ಖಾತೆ ಸಚಿವ ಕೆ.ಜೆ.ಜಾರ್ಜ್, ಜನತೆಯಲ್ಲಿ ಮನವಿ ಮಾಡಿದ್ದಾರೆ. ಬೆಂಗಳೂರು ಗ್ರಾಮಂತರ ಜಿಲ್ಲೆ, ಹೊಸಕೋಟೆ ತಾಲೂಕಿನ, ಯಲಚಹಳ್ಳಿ ಕೆರೆಯಂಗಳದಲ್ಲಿ, 'ಕುಸುಮ್– ಸಿ' ಯೋಜನೆಯಡಿ ಸ್ಥಾಪಿಸಿರುವ, 7 ದಶಾಂಶ 3 ಮೆಗಾವ್ಯಾಟ್ ಸಾಮರ್ಥ್ಯದ, ಸೌರ ವಿದ್ಯುತ್ ಉತ್ಪಾದನಾ ಘಟಕಕ್ಕೆ ಚಾಲನೆ ನಿಡಿ, ಅವರು ಮಾತನಾಡಿದರು. ಯೋಜನೆಗೆ ಬಳಸಿಕೊಳ್ಳಲಾಗುವ ಪ್ರಮಾಣದ, ಅರಣ್ಯ ಭೂಮಿಯಷ್ಟೇ ಪರ್ಯಾಯ ಅರಣ್ಯೀಕರಣಕ್ಕೆ ಭೂಮಿಯನ್ನು ಮೀಸಲಿಡಲಾಗುವುದು; ಸ್ವಾಧೀನಪಡಿಸಿಕೊಂಡ ಖಾಸಗಿ ಭೂಮಿಗೂ, ಸೂಕ್ತ ಪರಿಹಾರ ನಿಡಲಾಗುವುದು, ಎಂದರು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ರಾಷ್ಟ್ರೀಯ ಏಕತಾ ದಿನ; 'ವೈವಿಧ್ಯತೆಯಲ್ಲಿ ಏಕತೆ' ಬಿಂಬಿಸುವ, ಅರ್ಥಪೂರ್ಣ ಕಾರ್ಯಕ್ರಮ, ಆಯೋಜನೆ.
- 'ಜಾಗೃತಿ, ನಮ್ಮೆಲ್ಲರ ಸಾಮಾಜಿಕ ಜವಾಬ್ದಾರಿ' ಧ್ಯೇಯದೊಂದಿಗೆ, ವಿಚಕ್ಷಣಾ ಜಾಗೃತಿ ಸಪ್ತಾಹ.
- ಕರ್ನಾಟಕ ನವೋದ್ಯಮ ನೀತಿ; ಎಂಟು, ಟೆಕ್ನಾಲಜಿ ಬ್ಯುಸಿನೆಸ್ ಇನ್‌ಕ್ಯೂಬೇಟರ್ಸ್ ಸ್ಥಾಪನೆಗೆ, ಸಚಿವ ಸಂಪುಟ, ನಿರ್ಧಾರ.
- 'ಕೃಷಿ ಚಟುವಟಿಕೆಯಲ್ಲಿ ಡ್ರೋನ್ ಬಳಕೆ'; ರಾಷ್ಟ್ರೀಯ ಸಮ್ಮೇಳನಕ್ಕೆ, ಧಾರವಾಡ ಕೃಷಿ ವಿಶ್ವವಿದ್ಯಾಲಯದಲ್ಲಿ, ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ, ಈ ಬೆಳಗ್ಗೆ 7 ಗಂಟೆ 35 ನಿಮಿಷಕ್ಕೆ.

<><><>